**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 8281 / 2024**

ಚಾಸಾ :- 01 ಪ್ರಾಸಾ :- 01

| | |
|---|---|
| ಹೆಸರು | **ದೇವೆಂದ್ರಸ್ವಾಮಿ** |
| ತಂದೆ / ಗಂಡನ ಹೆಸರು | **ದಾಸಪ್ಪ** |
| ವಯಸ್ಸು | **41** |
| ಉದ್ಯೋಗ | **ಕೂಲಿ** |
| ವಿಳಾಸ | **ಕಲ್ಲತ್ತಗಿರಿ** |

**ದಿನಾಂಕಃ 28-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ** :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-

ಚಾಸಾ-2 ರವರು ಪರಿಚಯವಿರುತ್ತಾರೆ. ಆರೋಪಿ ಗೊತ್ತು. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಕಚೇರಿಗೆ ಕರೆದು ನನ್ನ ಸಹಿ ಪಡೆದಿರುತ್ತಾರೆ. ಈಗ ಸಾಕ್ಷಿಗೆ ಕೃತ್ಯ ಸ್ಥಳ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಕೃತ್ಯ ಸ್ಥಳ ಮಹಜರನ್ನು ನಿಪಿ-1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಏನು ಬರೆದಿರುತ್ತದೆಂದು ಗೊತ್ತಿರುವುದಿಲ್ಲ. ಈಗ ಸಾಕ್ಷಿಗೆ ಶೋಧನಾ ವಾರೆಂಟನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಶೋದನಾ ವಾರೆಂಟನ್ನು ನಿಪಿ-2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಏನು ಬರೆದಿರುತ್ತದೆಂದು ಗೊತ್ತಿರುವುದಿಲ್ಲ. ಈಗ ಸಾಕ್ಷಿಗೆ ಲಿಸ್ಟ್ ಆಫ್ ಆರ್ಟಿಕಲನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಲಿಸ್ಟ್ ಆಫ್ ಆರ್ಟಿಕಲನ್ನು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಗೆ ಮಾದರಿ ಮೊಹರಿನ ನಕಲನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ, ಸದರಿ ಮಾದರಿ ಮೊಹರಿನ ನಕಲನ್ನು ನಿಪಿ-4 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ನನ್ನ ಸಮಕ್ಷಮ ಯಾವುದೇ ಮಾಲುಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು** :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-

ದಿಃ 27-11-2023 ರಂದು ಸಂಜೆ 4.30 ರ ಸಮಯದಲ್ಲಿ ತಗುಚಿಕುಪ್ಪೆ ಗ್ರಾಮ ಬೆಂಗಳೂರು ಮಾಗಡಿ ಮುಖ್ಯರಸ್ತೆಯಲ್ಲಿ ಬರುವ ನಂಜಯ್ಯರವರಿಗೆ ಸೇರಿದ ಮನೆಯ ಮುಂಭಾಗದಲ್ಲಿ ಅಬಕಾರಿ ನಿರೀಕ್ಷಕರು ಮತ್ತು ಸಿಬ್ಬಂದಿಯವರು ಪಂಚನಾಮೆಗೆ ಸಹಕರಿಸುವಂತೆ ಕೇಳಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಹೊಸಪೇಟೆ ಸರ್ಕಲಿನಲ್ಲಿ ಗಸ್ತು ನಡೆಸುತ್ತಿದಾಗ ಬಾತ್ಮಿದಾರರು ತಗಚಿಕುಪ್ಪೆ ಗ್ರಾಮದಲ್ಲಿರುವ ನಂಜಯ್ಯ ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಮದ್ಯ ಮತ್ತು ಬಿಯರ್ ನ್ನು ಶೇಖರಣೆ ಮಾಡಿಕೊಂಡು ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ವಿಳಾಸಕ್ಕೆ ಹೋಗಿ ಅಂಗಡಿ ಮತ್ತು ಮನೆಯನ್ನು ಶೋದನೆ ಮಾಡಲು ನಿಮಗೆ ಸಹಕರಿಸಬೇಕೆಂದು ಕೋರಿ ನೀವು ಒಪ್ಪಿ ನೋಟಿಸನ್ನು ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಂತರ ಅಂಗಡಿಯ ಹತ್ತಿರ ನಂಜಯ್ಯ ಇದ್ದು ಆತನಿಗೆ ಬಂದ ಮಾಹಿತಿಯನ್ನು ತಿಳಿಸಿ ಶೋದನೆ ಮಾಡಿದಾಗ ಅಂಗಡಿಯ ಹಿಂಭಾಗದಲ್ಲಿದ್ದ ಶೀಟಿನ ಮನೆಯ ಉತ್ತರ ದಿಕ್ಕಿಗೆ ಎರಡು ಬಾಗಿಲುಗಳು ಇದ್ದು ಮನೆಯನ್ನು ಪ್ರವೇಶಿಸಿ ನೋಡಲಾಗಿ ದನದ ಕೊಟ್ಟಿಗೆಯಲ್ಲಿ ಒಂದು ಹಳದಿ ಬಣ್ಣದ ಪ್ಲಾಸ್ಟಿಕ್ ಚಿಲವಿದ್ದು ಸದರಿ ಚೀಲದಲ್ಲಿ ಪವರ್ ಕೂಲ್ ಬಿಯರ್ ಟಿನ್ ಗಳು ಮತ್ತು ಬಾಟಲಿಗಳು ಪತ್ತೆ ಆಗಿರುತ್ತದೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮನೆಯ ಬಾಗಿಲಿನ ಮುಂಭಾಗ ಒಂದು ರೂಂ ಇದ್ದು ಸದರಿ ರೂಮಿನಲ್ಲಿ ಒಂದು ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಹೊರ ತೆಗೆದು ನೋಡಲಾಗಿ 180 ML ನ 8 Old Admiron Brandy ಟೆಟ್ರಾ ಪ್ಯಾಕುಗಳು, 180 ML ನ 6 Old Monk Rum ಟೆಟ್ರಾ ಪ್ಯಾಕುಗಳು, 180 ML ನ 12 Old MC rum ಟೆಟ್ರಾ ಪ್ಯಾಕುಗಳು, 180 ML ನ 10 MC Whiskey ಬಾಟಲುಗಳು, 180 ML ನ 8 Back paper Dilex Whiskey ಟೆಟ್ರಾ ಪ್ಯಾಕುಗಳು, 180 ML ನ 9 O.T. ಟೆಟ್ರಾ ಪ್ಯಾಕುಗಳು=, 90 ML ನ 4 M.C. ಬ್ರಾಂಡಿಯ ಟೆಟ್ರಾ ಪ್ಯಾಕುಗಳು ಪತ್ತೆ ಆಗಿರುತ್ತದೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ . ಸದರಿ ಮುದ್ದೆ ಮಾಲುಗಳನ್ನು ನಿಮ್ಮ, ಚಾಸಾ-2 ಹಾಗೂ ಅಬಕಾರಿ ಸಿಬ್ಬಂದಿಗಳ ಸಮಕ್ಷಮ ಅಮಾನತು ಪಡಿಸಿಕೊಂಡು ಸಂಜೆ 4.35 ರಿಂದ 6 ಗಂಟೆಯವರೆಗೆ ಪಂಚನಾಮೆ ಕ್ರಮ ಅನುಸರಿಸಿ ಪಂಚನಾಮೆ ಜರುಗಿಸಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ . ಸಾಕ್ಷಿಯ ಹೇಳಿಕೆಯನ್ನು ನಿಪಿ-5 ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ನಿಮಗೆ ಎಲ್ಲಾ ಮಾಹಿತಿ ಗೊತ್ತಿದ್ದರು ಆರೋಪಿಯೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು** :- ಶ್ರೀ. **ಜಿ.ಹೆಚ್.ಎಂ.** ವಕೀಲರಿಂದ **ಆರೋಪಿ** ಪರವಾಗಿ :-

ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ :- ಇರುವುದಿಲ್ಲ.

ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.

**ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ : 8281 / 2024**

ಚಾಸಾ :- 02 ಪ್ರಾಸಾ :- 02

| | |
|---|---|
| ಹೆಸರು | **ಹನುಮನಾಯ್ಕ** |
| ತಂದೆ ಹೆಸರು | **ಗೋವಿಂದನಾಯ್ಕ** |
| ವಯಸ್ಸು | **78** |
| ಉದ್ಯೋಗ | **ಕೂಲಿ** |
| ವಿಳಾಸ | **ಚಿಕ್ಕತೊರೆವಾಳ್ಯ** |

**ದಿನಾಂಕ: 28-11-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ** :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-

ಚಾಸಾ-1 ರವರು ಪರಿಚಯವಿರುತ್ತಾರೆ. ಆರೋಪಿ ಗೊತ್ತು. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಕಚೇರಿಗೆ ಕರೆದು ನನ್ನ ಸಹಿ ಪಡೆದಿರುತ್ತಾರೆ. ಈಗ ಸಾಕ್ಷಿಗೆ ಕೃತ್ಯ ಸ್ಥಳ ಮಹಜರನ್ನು ನಿಪಿ-1 ಎಂದು ಗುರುತಿಸಲಾಗಿದ್ದು ಹಾಗೂ ಸಾಕ್ಷಿಯ ಹೆಬ್ಬಟ್ಟಿನ ಗುರುತನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಿಪಿ-1 ರಲ್ಲಿ ಏನು ಬರೆದಿರುತ್ತದೆಂದು ಗೊತ್ತಿರುವುದಿಲ್ಲ. ಈಗ ಸಾಕ್ಷಿಗೆ ಶೋದನಾ ವಾರೆಂಟನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಹೆಬ್ಬಟ್ಟಿನ ಗುರುತನ್ನು ನೋಡಿ ಗುರುತಿಸಿದ್ದರಿಂದ, ಸಾಕ್ಷಿಯ ಹೆಬ್ಬಟ್ಟಿನ ಗುರುತನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ನಿಪಿ-2 ರಲ್ಲಿ ಏನು ಬರೆದಿರುತ್ತದೆಂದು ಗೊತ್ತಿರುವುದಿಲ್ಲ. ನಿಪಿ-3 ರಲ್ಲಿ ಏನು ಬರೆದಿರುತ್ತದೆಂದು ಗೊತ್ತಿರುವುದಿಲ್ಲ. ಈಗ ಸಾಕ್ಷಿಗೆ ಲಿಸ್ಟ್ ಆಫ್ ಆರ್ಟಿಕಲನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಹೆಬ್ಬಟ್ಟಿನ ಗುರುತನ್ನು ನೋಡಿ ಗುರುತಿಸಿದ್ದರಿಂದ, ಸಾಕ್ಷಿಯ ಹೆಬ್ಬಟ್ಟಿನ ಗುರುತನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ನಿಪಿ-3 ರಲ್ಲಿ ಏನು ಬರೆದಿರುತ್ತದೆಂದು ಗೊತ್ತಿರುವುದಿಲ್ಲ. ಈಗ ಸಾಕ್ಷಿಗೆ ಮಾದರಿ ಮೊಹರಿನ ನಕಲನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಹೆಬ್ಬಟ್ಟಿನ ಗುರುತನ್ನು ನೋಡಿ ಗುರುತಿಸಿದ್ದರಿಂದ, ಸಾಕ್ಷಿಯ ಹೆಬ್ಬಟ್ಟಿನ ಗುರುತನ್ನು ನಿಪಿ-4(ಬಿ) ಎಂದು ಗುರುತಿಸಲಾಯಿತು. ನಿಪಿ-4 ರಲ್ಲಿ ಏನು ಬರೆದಿರುತ್ತದೆಂದು ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ಮಾಲುಗಳನ್ನು ಅಮಾನತು ಪಡಿಸಿಕೊಂಡಿರುವುದಿಲ್ಲ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು** :- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-

ದಿಃ 27-11-2023 ರಂದು ಸಂಜೆ 4.30 ರ ಸಮಯದಲ್ಲಿ ತಗುಚಿಕುಪ್ಪೆ ಗ್ರಾಮ ಬೆಂಗಳೂರು ಮಾಗಡಿ ಮುಖ್ಯರಸ್ತೆಯಲ್ಲಿ ಬರುವ ನಂಜಯ್ಯರವರಿಗೆ ಸೇರಿದ ಮನೆಯ ಮುಂಭಾಗದಲ್ಲಿ ಅಬಕಾರಿ ನಿರೀಕ್ಷಕರು ಮತ್ತು ಸಿಬ್ಬಂದಿಯವರು ಪಂಚನಾಮೆಗೆ ಸಹಕರಿಸುವಂತೆ ಕೇಳಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಹೊಸಪೇಟೆ ಸರ್ಕಲಿನಲ್ಲಿ ಗಸ್ತು ನಡೆಸುತ್ತಿದಾಗ ಬಾತ್ಮಿದಾರರು ತಗಚಿಕುಪ್ಪೆ ಗ್ರಾಮದಲ್ಲಿರುವ ನಂಜಯ್ಯ ಯಾವುದೇ ಪರವಾನಗಿ ಇಲ್ಲದೆ ಅಕ್ರಮವಾಗಿ ಮದ್ಯ ಮತ್ತು ಬಿಯರ್ ನ್ನು ಶೇಖರಣೆ ಮಾಡಿಕೊಂಡು ಮಾರಾಟ ಮಾಡುತ್ತಿದ್ದಾರೆ ಎಂದು ಮಾಹಿತಿ ಬಂದಿರುತ್ತದೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸದರಿ ವಿಳಾಸಕ್ಕೆ ಹೋಗಿ ಅಂಗಡಿ ಮತ್ತು ಮನೆಯನ್ನು ಶೋದನೆ ಮಾಡಲು ನಿಮಗೆ ಸಹಕರಿಸಬೇಕೆಂದು ಕೋರಿ ನೀವು ಒಪ್ಪಿ ನೋಟಿಸನ್ನು ಪಡೆದುಕೊಂಡಿರುತ್ತೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನಂತರ ಅಂಗಡಿಯ ಹತ್ತಿರ ನಂಜಯ್ಯ ಇದ್ದು ಆತನಿಗೆ ಬಂದ ಮಾಹಿತಿಯನ್ನು ತಿಳಿಸಿ ಶೋದನೆ ಮಾಡಿದಾಗ ಅಂಗಡಿಯ ಹಿಂಭಾಗದಲ್ಲಿದ್ದ ಶೀಟಿನ ಮನೆಯ ಉತ್ತರ ದಿಕ್ಕಿಗೆ ಎರಡು ಬಾಗಿಲುಗಳು ಇದ್ದು ಮನೆಯನ್ನು ಪ್ರವೇಶಿಸಿ ನೋಡಲಾಗಿ ದನದ ಕೊಟ್ಟಿಗೆಯಲ್ಲಿ ಒಂದು ಹಳದಿ ಬಣ್ಣದ ಪ್ಲಾಸ್ಟಿಕ್ ಚಿಲವಿದ್ದು ಸದರಿ ಚೀಲದಲ್ಲಿ ಪವರ್ ಕೂಲ್ ಬಿಯರ್ ಟಿನ್ ಗಳು ಮತ್ತು ಬಾಟಲಿಗಳು ಪತ್ತೆ ಆಗಿರುತ್ತದೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಮನೆಯ ಬಾಗಿಲಿನ ಮುಂಭಾಗ ಒಂದು ರೂಂ ಇದ್ದು ಸದರಿ ರೂಮಿನಲ್ಲಿ ಒಂದು ಹಳದಿ ಬಣ್ಣದ ಪ್ಲಾಸ್ಟಿಕ್ ಚೀಲವನ್ನು ಹೊರ ತೆಗೆದು ನೋಡಲಾಗಿ 180 ML ನ 8 Old Admiron Brandy ಟೆಟ್ರಾ ಪ್ಯಾಕುಗಳು, 180 ML ನ 6 Old Monk Rum ಟೆಟ್ರಾ ಪ್ಯಾಕುಗಳು, 180 ML ನ 12 Old MC rum ಟೆಟ್ರಾ ಪ್ಯಾಕುಗಳು, 180 ML ನ 10 MC Whiskey ಬಾಟಲುಗಳು, 180 ML ನ 8 Back paper Dilex Whiskey ಟೆಟ್ರಾ ಪ್ಯಾಕುಗಳು, 180 ML ನ 9 O.T. ಟೆಟ್ರಾ ಪ್ಯಾಕುಗಳು=, 90 ML ನ 4 M.C. ಬ್ರಾಂಡಿಯ ಟೆಟ್ರಾ ಪ್ಯಾಕುಗಳು ಪತ್ತೆ ಆಗಿರುತ್ತದೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ . ಸದರಿ ಮುದ್ದೆ ಮಾಲುಗಳನ್ನು ನಿಮ್ಮ, ಚಾಸಾ-1 ಹಾಗೂ ಅಬಕಾರಿ ಸಿಬ್ಬಂದಿಗಳ ಸಮಕ್ಷಮ ಅಮಾನತು ಪಡಿಸಿಕೊಂಡು ಸಂಜೆ 4.35 ರಿಂದ 6 ಗಂಟೆಯವರೆಗೆ ಪಂಚನಾಮೆ ಕ್ರಮ ಅನುಸರಿಸಿ ಪಂಚನಾಮೆ ಜರುಗಿಸಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಯ ಹೇಳಿಕೆಯನ್ನು ನಿಪಿ-6 ಎಂದು ಗುರುತಿಸಲಾಯಿತು. ಈ ಪ್ರಕರಣದ ಬಗ್ಗೆ ನಿಮಗೆ ಎಲ್ಲಾ ಮಾಹಿತಿ ಗೊತ್ತಿದ್ದರು ಆರೋಪಿಯೊಂದಿಗೆ ರಾಜೀ ಮಾಡಿಕೊಂಡು ಸುಳ್ಳು ಸಾಕ್ಷ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲು** :- ಶ್ರೀ. **ಜಿ.ಹೆಚ್.ಎಂ.** ವಕೀಲರಿಂದ **ಆರೋಪಿ** ಪರವಾಗಿ :-

ಆರೋಪಿ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ.

ಮರು ವಿಚಾರಣೆ :- ಇರುವುದಿಲ್ಲ.

ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,

ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ.
ಮಾಗಡಿ.